# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 97 (955) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 11-03-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರವು 2023ರಲ್ಲಿ ಜಮೀನುಗಳ ಮಾರ್ಗಸೂಚಿ ಮೌಲ್ಯವನ್ನು (Guideline Value) ಹೆಚ್ಚಿಸಲಾಗಿದೆಯೇ? | ಮಾರ್ಗಸೂಚಿ ಮೌಲ್ಯವನ್ನು (Guideline Value) ದಿನಾಂಕ: 01-10-2023ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದೆ. |
| ಆ) | ಭೂಸ್ವಾಧೀನ ಮಾಡುವ ಸಂದರ್ಭಗಳಲ್ಲಿ 2023 ರಲ್ಲಿ ಹೆಚ್ಚಿಸಿದ ಮಾರ್ಗಸೂಚಿ ಮೌಲ್ಯವನ್ನು ಪರಿಗಣಿಸದೇ 2019ರ ಮಾರ್ಗಸೂಚಿ ಮೌಲ್ಯವನ್ನು ಆಧಾರವಾಗಿಸಿಕೊಂಡು ಪರಿಹಾರ ನಿಗದಿ ಮಾಡುತ್ತಿರುವುದು ನಿಜವೇ; | ಭೂಸ್ವಾಧೀನ ಕಾಯ್ದೆ 2013ರಡಿ ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿರುವ ಜಮೀನುಗಳಿಗೆ ಜಮೀನಿನ ಮೌಲ್ಯವನ್ನು ನಿಗಧಿಪಡಿಸಲು ಸದರಿ ಕಾಯ್ದೆಯ ಕಲಂ-26ರನ್ವಯ ಕಲಂ 11(1)ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ದಿನಾಂಕದ ಹಿಂದಿನ 03 ವರ್ಷಗಳ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಮಾರಾಟವಾದ ಕ್ರಯಗಳನ್ನು ಪಡೆದು, ಸದರಿ ಕ್ರಯಗಳಲ್ಲಿ ಅತಿ ಹೆಚ್ಚು ದರಕ್ಕೆ ಮಾರಾಟವಾದ ಶೇ.50 ರಷ್ಟು ಕ್ರಯಗಳನ್ನು ಪರಿಗಣಿಸಿ ಅದರನ್ವಯ ಸ್ವಾಧೀನಪಡಿಸಿಕೊಳ್ಳುವ ಜಮೀನಿನ ದರ ನಿಗಧಿಪಡಿಸಲಾಗುತ್ತಿದೆ. |
| ಇ) | 2023ರ ಮಾರ್ಗಸೂಚಿ ಮೌಲ್ಯ ಹೆಚ್ಚಳ ಜಾರಿಗೆ ಬಂದಿದ್ದರೂ 2019ರ ಮೌಲ್ಯವನ್ನು ಅನ್ವಯಿಸುವುದಕ್ಕೆ ಸರ್ಕಾರದ ಸ್ಪಷ್ಟವಾದ ಕಾರಣವೇನು: ಇದರಿಂದ ರೈತರಿಗೆ ಆರ್ಥಿಕ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಭೂಸ್ವಾಧೀನ ಕಾಯ್ದೆ-2013ರಡಿ ಸ್ವಾಧೀನಗೊಳ್ಳುವ ಜಮೀನುಗಳಿಗೆ ದರ ನಿಗಧಿಪಡಿಸುವಲ್ಲಿ ಕಲಂ 11(1)ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ದಿನಾಂಕದ ಹಿಂದಿನ 03 ವರ್ಷಗಳ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಮಾರಾಟವಾದ ಕ್ರಯಗಳನ್ನು ಪಡೆದು ಸದರಿ ದರ ಹಾಗೂ ಮಾರ್ಗಸೂಚಿ ದರ ಇವುಗಳಲ್ಲಿ ಯಾವುದೋ ಹೆಚ್ಚೋ ಅದನ್ನು ಪರಿಗಣಿಸಿ ದರ ನಿಗಧಿಪಡಿಸುತ್ತಿದೆ.<br><br>ಮುಂದುವರೆದು, ಸ್ವಾಧೀನಗೊಳ್ಳುವ ಜಮೀನುಗಳಿಗೆ ದರ ನಿಗಧಿಪಡಿಸುವಲ್ಲಿ ಭೂಸ್ವಾಧೀನ ಕಾಯ್ದೆ 2013ರ ಕಲಂ 26 ರಿಂದ 30ರಡಿಯಲ್ಲಿರುವ ಮಾನದಂಡಗಳನ್ವಯ ದರ ನಿಗಧಿಪಡಿಸಲಾಗುತ್ತಿದ್ದು, ಸದರಿ ದರಕ್ಕೆ ಪ್ರಾಥಮಿಕ ಅಧಿಸೂಚನೆ ದಿನಾಂಕದಿಂದ ಐತೀರ್ಪು ಘೋಷಣೆಯ ದಿನಾಂಕದವರೆಗಿನ ದಿನಗಳಿಗೆ ಮೂಲ ಮಾರುಕಟ್ಟೆ ಮೌಲ್ಯಕ್ಕೆ ಶೇ.12ರಷ್ಟು ಹೆಚ್ಚುವರಿ ಮಾರುಕಟ್ಟೆ ಮೌಲ್ಯವನ್ನು ನೀಡಲಾಗುತ್ತಿದೆ. |
| ಈ) | ಮುಂದಿನ ದಿನಗಳಲ್ಲಿ ಭೂಸ್ವಾಧೀನ ಪ್ರಕರಣಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮಾರ್ಗಸೂಚಿ ಮೌಲ್ಯವನ್ನೇ ಆಧಾರವಾಗಿ ಪರಿಗಣಿಸಿ ನ್ಯಾಯಸಮ್ಮತ ಪರಿಹಾರ ನೀಡಲು ಕ್ರಮ ಕೈಗೊಳ್ಳುವ ಯೋಜನೆ ಸರ್ಕಾರದ ಮುಂದಿದೆಯೇ? | |

ಕಂಇ/69/ಎಂಎನ್ಎಸ್ಎ/2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು.